# ದಾವಣಗೆರೆ ವಿಶ್ವವಿದ್ಯಾನಿಲಯ
# Davangere University

ಕುಲಸಚಿವರ ಕಛೇರಿ (ಪರೀಕ್ಷಾಂಗ),
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577007.
ದೂರವಾಣಿ ಸಂಖ್ಯೆ: 08192-208420/208104.

**Office of the Registrar (Evaluation)**
**Davangere University,**
**Shivagangothri, Davangere -577007.**
**Phone No. 08192-208420/208104.**

Email ID: examination@davangereuniversity.ac.in & registrarevaluationdvg@gmail.com


ಸಂಖ್ಯೆ:ದಾವಿವಿ:ಪವಿ:2020-21/2691

ದಿನಾಂಕ:08.12.2020

## -:ಆದೇಶ:-

ವಿಷಯ: ಸ್ನಾತಕ/ಸ್ನಾತಕೋತ್ತರ ಹಾಗೂ ಇಂಟರ್‌ಮೀಡಿಯೇಟ್ ಪರೀಕ್ಷೆಗಳ ಫಲಿತಾಂಶ ಪ್ರಕಟಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ED 197 UNE 2020 ಬೆಂಗಳೂರು ದಿನಾಂಕ:10.07.2020
2. ಡೀನರ ಸಮಿತಿಯ ಅನುಮೋದನೆ ದಿನಾಂಕ:07.12.2020
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:05.12.2020.

******

**:ಶೈಕ್ಷಣಿಕ ವರ್ಷ 2019-20ರ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದ ಫಲಿತಾಂಶಗಳ ಮಾರ್ಗಸೂಚಿಗಳು:**
(ಸರ್ಕಾರದ ಮಾರ್ಗಸೂಚಿ ಹಾಗೂ ಯುಜಿಸಿ ನಿಯಮಾನುಸಾರ ರಚಿಸಲಾಗಿದೆ)

### I. ಸೆಮಿಸ್ಟರ್/ವಾರ್ಷಿಕ ಪದ್ಧತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ Intermediate ವಿದ್ಯಾರ್ಥಿಗಳ ಫಲಿತಾಂಶವನ್ನು ನೀಡುವ ವಿಧಾನ

1. ಪದವಿಯು ಆರು ಸೆಮಿಸ್ಟರ್‌ಗಳನ್ನು ಒಳಗೊಂಡಿದ್ದಲ್ಲಿ ಪ್ರಸ್ತುತ ಎರಡು ಮತ್ತು ನಾಲ್ಕನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಮುಂದಿನ ಸೆಮಿಸ್ಟರ್ ಗೆ Promote ಮಾಡಲಾಗಿದೆ.

2. ಪದವಿಯು ವಾರ್ಷಿಕ ಪದ್ಧತಿಯಲ್ಲಿದ್ದರೆ (ಬಿ.ವಿ.ಎ) ಪ್ರಸ್ತುತ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ Promote ಮಾಡಲಾಗಿದೆ.

**Intermediate ವಿದ್ಯಾರ್ಥಿಗಳು**

- ಆರು ಸೆಮಿಸ್ಟರ್‌ಗಳ ಪದವಿಗಳಲ್ಲಿ ಎರಡು ಮತ್ತು ನಾಲ್ಕನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು
- ನಾಲ್ಕು ವರ್ಷಗಳ ಬಿ.ವಿ.ಎ ವಾರ್ಷಿಕ ಪದ್ಧತಿಯ ಕಾರ್ಯಕ್ರಮದಲ್ಲಿ ಒಂದು, ಎರಡು ಮತ್ತು ಮೂರನೇ ವರ್ಷದ ವಿದ್ಯಾರ್ಥಿಗಳು.
- ನಾಲ್ಕು ಸೆಮಿಸ್ಟರ್‌ಗಳ ಸ್ನಾತಕೋತ್ತರ ಪದವಿಗಳಲ್ಲಿ ಎರಡನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು.

## II. Intermediate ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರಸಕ್ತ ಸೆಮಿಸ್ಟರ್‌ನ /ವರ್ಷದ ಅಂಕಗಳನ್ನು ನಿರ್ಧರಿಸುವ ವಿಧಾನ

### 1. ಆರು ಸೆಮಿಸ್ಟರ್‌ಗಳನ್ನು ಒಳಗೊಂಡಿರುವ ಪದವಿಗಳಿಗೆ ಈ ಕೆಳಗಿನಂತೆ ಅಂಕಗಳನ್ನು ಲೆಕ್ಕಚಾರ ಮಾಡಲಾಗುವುದು.

**a.** ಪ್ರಸಕ್ತ ಎರಡನೇ ಸೆಮಿಸ್ಟರ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಅವರು ಪ್ರಥಮ ಸೆಮಿಸ್ಟರ್‌ನಲ್ಲಿ ಎಲ್ಲಾ ಕೋರ್ಸು/ಪತ್ರಿಕೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ, ಪ್ರಥಮ ಸೆಮಿಸ್ಟರ್‌ನಲ್ಲಿ ಪಡೆದಿರುವ ಶೇ.50 ಅಂಕಗಳು ಮತ್ತು ಎರಡನೇ ಸೆಮಿಸ್ಟರ್‌ನ ಆಂತರಿಕ ಪರೀಕ್ಷೆಗಳಲ್ಲಿ ಪಡೆದಿರುವ ಶೇ.50 ಅಂಕಗಳನ್ನು ಒಟ್ಟು ಸೇರಿಸಿ ಎರಡನೇ ಸೆಮಿಸ್ಟರ್‌ನ ಅಂಕಗಳನ್ನು ನೀಡಲಾಗುವುದು.

**b.** ಪ್ರಸಕ್ತ ನಾಲ್ಕನೇ ಸೆಮಿಸ್ಟರ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಅವರು ತೃತೀಯ ಸೆಮಿಸ್ಟರ್‌ನಲ್ಲಿ ಎಲ್ಲಾ ಕೋರ್ಸ್/ಪತ್ರಿಕೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ, ತೃತೀಯ ಸೆಮಿಸ್ಟರ್‌ನಲ್ಲಿ ಪಡೆದಿರುವ ಶೇ.50 ಅಂಕಗಳು ಮತ್ತು ನಾಲ್ಕನೇ ಸೆಮಿಸ್ಟರ್‌ನ ಆಂತರಿಕ ಪರೀಕ್ಷೆಗಳಲ್ಲಿ ಪಡೆದಿರುವ ಶೇ.50 ಅಂಕಗಳನ್ನು ಒಟ್ಟು ಸೇರಿಸಿ ನಾಲ್ಕನೇ ಸೆಮಿಸ್ಟರ್‌ನ ಅಂಕಗಳನ್ನು ನೀಡಲಾಗುವುದು.

**c.** ಪ್ರಸಕ್ತ ಎರಡನೇ/ನಾಲ್ಕನೇ ಸೆಮಿಸ್ಟರ್‌ನಲ್ಲಿರುವ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಲ್ಲಿ, ಉತ್ತೀರ್ಣರಾದ ವಿಷಯಗಳಲ್ಲಿ ಪಡೆದಿರುವ ಶೇ.50 ಅಂಕಗಳು ಮತ್ತು ಎರಡನೇ/ನಾಲ್ಕನೇ ಸೆಮಿಸ್ಟರ್‌ನ ಆಂತರಿಕ ಪರೀಕ್ಷೆಗಳಲ್ಲಿ ಪಡೆದಿರುವ ಶೇ.50 ಅಂಕಗಳನ್ನು ಒಟ್ಟು ಸೇರಿಸಿ ನಾಲ್ಕನೇ ಸೆಮಿಸ್ಟರ್‌ನ ಅಂಕಗಳನ್ನು ನೀಡಲಾಗುವುದು.

**ಉದಾಹರಣೆ:-** ಎರಡನೇ/ನಾಲ್ಕನೇ ಸೆಮಿಸ್ಟರ್ ಫಲಿತಾಂಶವನ್ನು ಪ್ರಕಟಿಸಲು ವಿದ್ಯಾರ್ಥಿಯು ಒಂದನೇ/ಮೂರನೇ ಸೆಮಿಸ್ಟರ್‌ನಲ್ಲಿ ತೇರ್ಗಡೆಯಾದ ಎಲ್ಲಾ ಪತ್ರಿಕೆಗಳ ಒಟ್ಟು ಅಂಕಗಳ (ಸೈದ್ಧಾಂತಿಕ+ಆಂತರಿಕ) ಸರಾಸರಿಯನ್ನು A ಎಂದು ಪರಿಗಣಿಸಲಾಗಿದೆ. A ಯನ್ನು ಶೇ.50ಕ್ಕೆ ಮಿತಿಗೊಳಿಸಿ (Scale Down) B ಎಂದು ಪರಿಗಣಿಸಲಾಗಿದೆ. B ಯನ್ನು ಎಲ್ಲಾ ಪತ್ರಿಕೆಗಳ ಫಲಿತಾಂಶವನ್ನು ನಿರ್ಧರಿಸಲು ಬಳಸಲಾಗುವುದು. ವಿದ್ಯಾರ್ಥಿಯು ಎರಡನೇ/ನಾಲ್ಕನೇ ಸೆಮಿಸ್ಟರ್‌ನ
$X_1$ ಪತ್ರಿಕೆಯಲ್ಲಿ ಪಡೆದ ಆಂತರಿಕ ಅಂಕವನ್ನು (ಗರಿಷ್ಠ 20) ಒಟ್ಟು 50 ಅಂಕಗಳಿಗೆ ಮಾರ್ಪಡಿಸಿ C ಎಂದು ಪರಿಗಣಿಸಲಾಗಿದೆ. B ಮತ್ತು C ಅನ್ನು ಕೂಡಿಸಿ ಬರುವ D ಯನ್ನು ಶೇ.80ಕ್ಕೆ ಮಿತಿಗೊಳಿಸಿ ಇದನ್ನು ವಿದ್ಯಾರ್ಥಿಯು $X_1$ ಪತ್ರಿಕೆಯ ಸೈದ್ಧಾಂತಿಕ ಪತ್ರಿಕೆಯಲ್ಲಿ ಪಡೆದ ಅಂಕಗಳೆಂದು ಪರಿಗಣಿಸಲಾಗಿದೆ. ಸೈದ್ಧಾಂತಿಕ ಅಂಕಗಳಿಗೆ ನೈಜವಾಗಿ ಪಡೆದ IA (ಆಂತರಿಕ) ಅಂಕಗಳನ್ನು ಸೇರಿಸಿ $X_1$ ಪತ್ರಿಕೆಯ ಫಲಿತಾಂಶವನ್ನು ನಿರ್ಣಯಿಸಲಾಗುವುದು. ಈ ನಿಯಮವನ್ನು ಎಲ್ಲಾ ಪತ್ರಿಕೆಗಳಿಗೂ ($X_1$, $X_2$, $X_3$ ................$X_n$) ಅನ್ವಯಿಸಲಾಗುವುದು ಹಾಗೂ ಇದೇ ನಿಯಮವನ್ನು ಪ್ರಾಯೋಗಿಕ ಪತ್ರಿಕೆಗಳ ಅಂಕಗಳನ್ನು ನಿರ್ಧರಿಸಲು ಬಳಸಲಾಗುವುದು.

### 2. ವಾರ್ಷಿಕ ಪದ್ಧತಿಯ (ಬಿ.ವಿ.ಎ) ಪದವಿಗಳಿಗೆ ಈ ಕೆಳಗಿನಂತೆ ಅಂಕಗಳನ್ನು ಲೆಕ್ಕಾಚಾರ ಮಾಡಲಾಗುವುದು.

**a.** ಪ್ರಸಕ್ತ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅವರು ಪಡೆದಿರುವ ಆಂತರಿಕ ಪರೀಕ್ಷಾ ಅಂಕಗಳನ್ನು ಕೋರ್ಸ್/ ಪತ್ರಿಕೆಯ ಗರಿಷ್ಠ ಅಂಕಗಳಿಗೆ ಉನ್ನತೀಕರಿಸಿ ಫಲಿತಾಂಶ ನೀಡಲಾಗುವುದು.

**b.** ಪ್ರಸಕ್ತ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಅವರು ಪ್ರಥಮ ವರ್ಷದ ಪರೀಕ್ಷೆಗಳಲ್ಲಿ ಎಲ್ಲಾ ಕೋರ್ಸ್/ ಪತ್ರಿಕೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ, ಪ್ರಥಮ ವರ್ಷದಲ್ಲಿ ಪಡೆದಿರುವ ಶೇ.50 ಅಂಕಗಳು ಮತ್ತು ದ್ವಿತೀಯ ವರ್ಷದ ಆಂತರಿಕ ಪರೀಕ್ಷೆಗಳಲ್ಲಿ ಪಡೆದಿರುವ ಶೇ.50 ಅಂಕಗಳನ್ನು ಒಟ್ಟು ಸೇರಿಸಿ ದ್ವಿತೀಯ ವರ್ಷದ ಅಂಕಗಳನ್ನು ನೀಡಲಾಗುವುದು.

**c.** ಪ್ರಸಕ್ತ ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಅವರು ದ್ವಿತೀಯ ವರ್ಷದ ಪರೀಕ್ಷೆಗಳಲ್ಲಿ ಎಲ್ಲಾ ಕೋರ್ಸ್/ ಪತ್ರಿಕೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ, ದ್ವಿತೀಯ ವರ್ಷದಲ್ಲಿ ಪಡೆದಿರುವ ಶೇ.50 ಅಂಕಗಳು ಮತ್ತು ತೃತೀಯ ವರ್ಷದ ಆಂತರಿಕ ಪರೀಕ್ಷೆಗಳಲ್ಲಿ ಪಡೆದಿರುವ ಶೇ 50 ಅಂಕಗಳನ್ನು ಒಟ್ಟು ಸೇರಿಸಿ ತೃತೀಯ ವರ್ಷದ ಅಂಕಗಳನ್ನು ನೀಡಲಾಗುವುದು.

**3.** ನಿರ್ಧರಿಸಿ ಪ್ರಕಟಿಸಿದ ಫಲಿತಾಂಶದಲ್ಲಿ ವಿದ್ಯಾರ್ಥಿಗೆ ಯಾವುದೇ ಅಸಮಾಧಾನವಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಸೆಮಿಸ್ಟರ್‌ನ ಯಾವುದೇ ಪತ್ರಿಕೆ/ಎಲ್ಲಾ ಪತ್ರಿಕೆಗಳ ಫಲಿತಾಂಶವನ್ನು ತಿರಸ್ಕರಿಸಿ ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದಿಂದ ನಡೆಸಲ್ಪಡುವ ಆಯಾ ಸೆಮಿಸ್ಟರ್‌ಗಳ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿರುತ್ತದೆ. ಹಾಗೂ ಪ್ರಸಕ್ತ ಪದ್ಧತಿಯಲ್ಲಿ ಅಂಕಗಳನ್ನು ಮತ್ತು ಪಲಿತಾಂಶವನ್ನು ಲೆಕ್ಕಚಾರ ಮಾಡಲು ಇರುವ ಅರ್ಹತೆಯನ್ನು ಪೂರೈಸದ ಈ ಕೆಳಗಿನ ವಿದ್ಯಾರ್ಥಿಗಳು ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದಿಂದ ನಡೆಸಲ್ಪಡುವ ಆಯಾ ಸೆಮಿಸ್ಟರ್/ವಾರ್ಷಿಕ ಪರೀಕ್ಷೆಗಳಿಗೆ ಹಾಜರಾಗಬೇಕಾಗುವುದು.

**3.** ಯಾವುದೇ ವಿದ್ಯಾರ್ಥಿಗೆ ಕೋವಿಡ್-19ರ ಹಿನ್ನೆಲೆಯಲ್ಲಿ ಶೈಕ್ಷಣಿಕ ತೊಂದರೆಗಳು/ಅಡೆತಡೆಗಳು ಉಂಟಾಗದಂತೆ ನೋಡಿಕೊಳ್ಳಲು ಮತ್ತು ಈ ಶೈಕ್ಷಣಿಕ ವರ್ಷದ ಎಲ್ಲಾ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಪೂರಕ ಸಹಕಾರಗಳನ್ನು ನೀಡಲು ಗೌರವಾನ್ವಿತ ಕುಲಪತಿಗಳು ನಿರ್ದೇಶಿಸಿರುತ್ತಾರೆ. ಆದುದರಿಂದ ಎಲ್ಲಾ ವಿದ್ಯಾರ್ಥಿಗಳ, ಪ್ರಾಂಶುಪಾಲರ, ಶಿಕ್ಷಕರ, ಪೋಷಕರ ಸಮಾಜದ ಮತ್ತು ದೇಶದ ಹಿತ ರಕ್ಷಣೆಗೆ ತಮ್ಮೆಲ್ಲರ ಸಹಾಯ ಮತ್ತು ಸಹಕಾರಗಳನ್ನು ಕೋರಲಾಗಿದೆ.

**<u>ವಿಶೇಷ ಸೂಚನೆಃ-</u>**

- ಮೇಲಿನ ಮಾರ್ಗಸೂಚಿಗಳಲ್ಲಿ ತಿಳಿಸಲಾದ ವಿಷಯಗಳು, ವಿವರಗಳು, ಇತ್ಯಾದಿ ಕೋವಿಡ್-19ರ ಹಿನ್ನೆಲೆಯಲ್ಲಿ 2019-20ರ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯಿಸುತ್ತವೆ.
- ಮೇಲಿನ ಲೆಕ್ಕಾಚಾರದ ಪ್ರಕಾರ ನೀಡಲಾಗುವ ಅಂಕಗಳನ್ನು ಶ್ರೇಣಿ(Class), ರ್‍ಯಾಂಕ್(Rank) ಅಥವಾ ಇನ್ನಾವುದೇ ಅರ್ಹತಾ ಮಾನದಂಡಗಳನ್ನು ನಿರ್ಧರಿಸಲು ಪರಿಗಣಿಸಲಾಗುವುದಿಲ್ಲ. (One-time measure scheme)

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577002.

ಗೆ,
ಮೆ: ಲಾಜಿಸಿಸ್ ಲಿಮಿಟೆಡ್,
ದಾವಣಗೆರೆ ವಿಶ್ವವಿದ್ಯಾನಿಲಯ, ಶಾಖೆ,
ಶಿವಗಂಗೋತ್ರಿ,
ದಾವಣಗೆರೆ.

**<u>ಪ್ರತಿಗಳುಃ-</u>**
1. ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ,. ದಾವಣಗೆರೆ.
2. ಕಛೇರಿ ಪ್ರತಿ.